# ಕರ್ನಾಟಕ ಸರ್ಕಾರ
## ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಆಯುಕ್ತರವರ ಕಛೇರಿ, ಗ್ರಾ.ಕು.ನೀ.&.ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ,
ಬೆಂಗಳೂರು – 560 009. ☎ : 080–22240508 📠 : 22240509 ಈ–ಮೇಲ್: krwssd@gmail.com


ನಂ.ಗ್ರಾಕುನೀ&ನೈಇ/05/ಲೆಕ್ಕ/2019 ದಿನಾಂಕ: 29-06-2019

## ಅಧಿಕೃತ ಜ್ಞಾಪನ

**ವಿಷಯ:–** ಡಾ॥ ಡಿ.ಎಂ. ನಂಜುಂಡಪ್ಪ ವರದಿ ಆಧಾರಿತ ರಾಜ್ಯದ ಹಿಂದುಳಿದ ತಾಲ್ಲೂಕುಗಳಿಗೆ ವಿಶೇಷ ಅಭಿವೃದ್ಧಿ ಕಾರ್ಯಕ್ರಮ (SDP) ಯೋಜನೆಯಡಿ ಗ್ರಾಮೀಣ ಕುಡಿಯುವ ನೀರು ಪೂರೈಕೆಗಾಗಿ **2019–20**ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:–** 1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/48/ಗ್ರಾಕುನೀ&ನೈಇ/ಲೆಶಾ/2018–19, ಬೆಂಗಳೂರು, ದಿನಾಂಕ 28–01–2019 ಮತ್ತು ದಿನಾಂಕ:02–02–2019.

ಮೇಲ್ಕಂಡ ಉಲ್ಲೇಖ (1)ರ ಆದೇಶಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ 2018–19ನೇ ಸಾಲಿನ ಲೆಕ್ಕ ಶೀರ್ಷಿಕೆ 4215–01–102–2–01 ಅಡಿ ರಾಜ್ಯದ ಪಾಲಿನ ನಾಲ್ಕನೇ ಕಂತಿನ ರಾಜ್ಯವಲಯದ ಅನುದಾನ ರೂ.24459.50 ಲಕ್ಷಗಳನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಈಗಾಗಲೇ ಬಿಡುಗಡೆಗೊಳಿಸಲಾಗಿರುತ್ತದೆ.

ಮುಂದುವರೆದು, ಸದರಿ ರಾಜ್ಯವಲಯದ ಅನುದಾನದಲ್ಲಿ ಪ್ರಸ್ತುತ 2019–20 ನೇ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರು ಯೋಜನೆಯ ವಿಶೇಷ ಅಭಿವೃದ್ಧಿ ಕಾರ್ಯಕ್ರಮ (SDP, WPP-SDP) ಯೋಜನೆ ಲೆಕ್ಕ ಶೀರ್ಷಿಕೆ 4215-01-102-2-01-133 ಅಡಿ **ರೂ.258.24 ಲಕ್ಷ**ಗಳ ಅನುದಾನವನ್ನು ರಾಜ್ಯದ ಜಿಲ್ಲೆಗಳ ಹಿಂದುಳಿದ ತಾಲ್ಲೂಕುಗಳ ವಿಭಾಗಗಳ ಕೋರಿಕೆಯಂತೆ ಬಿಡುಗಡೆ ಮಾಡಲು ಇಲಾಖೆಯು ನಿರ್ಧರಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

## ಆದೇಶ

ಪೀಠಿಕೆಯಲ್ಲಿನ ಉದ್ದೇಶಿತ ಗ್ರಾಮೀಣ ನೀರು ಪೂರೈಕೆ ಕಾರ್ಯಕ್ರಮಗಳ ಅನುಷ್ಠಾನ ಸಲುವಾಗಿ ಡಾ॥ ಡಿ.ಎಂ. ನಂಜುಂಡಪ್ಪ ವರದಿ ಆಧಾರಿತ ಹಿಂದುಳಿದ ತಾಲ್ಲೂಕುಗಳಿಗೆ **ವಿಶೇಷ ಅಭಿವೃದ್ಧಿ ಕಾರ್ಯಕ್ರಮ SDP, WPP-SDP** ಯೋಜನೆಯಡಿ ಲೆಕ್ಕ ಶೀರ್ಷಿಕೆ 4215–01–102–2–01–133 ಅಡಿ **ರೂ.258.24 ಲಕ್ಷ**ಗಳ ಅನುದಾನವನ್ನು ಅನುಬಂದ ದಂತೆ ಹಿಂದುಳಿದ ತಾಲ್ಲೂಕುಗಳಿಗೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಮೇಲ್ಕಂಡ ಅನುದಾನವನ್ನು ಗ್ರಾಮೀಣ ನೀರು ಪೂರೈಕೆ ಬಾಬ್ತಿನ ಬೇಡಿಕೆಗಳ ಸಂಬಂಧ NRDWP ಮಾರ್ಗಸೂಚಿಗಳನ್ವಯ IMIS ನಲ್ಲಿ ದಾಖಲಾಗಿರುವ **ವಿಶೇಷ ಅಭಿವೃದ್ಧಿ ಕಾರ್ಯಕ್ರಮ SDP,** ಯೋಜನೆಯಡಿ ಅನುಮೋದಿತ ಕ್ರಿಯಾಯೋಜನೆಗೆ ಆಯಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ರಾಜ್ಯ ವಲಯದ ಲೆಕ್ಕ ಶೀರ್ಷಿಕೆ 4215-01-102-2-01-133 ಅಡಿ RTGS ಮುಖೇನ ಈಗಾಗಲೇ ಗೊತ್ತುಪಡಿಸಿರುವ SWSM ಬ್ಯಾಂಕ್ ಮೂಲ ಉಳಿತಾಯ ಖಾತೆ ಸಂಖ್ಯೆ: 04462010091577 ಮುಖಾಂತರ ವಿನಿಯೋಗಿಸತಕ್ಕದ್ದು.

3. ಸಂಬಂಧಿಸಿದ ವಿಭಾಗಗಳು ಆರ್.ಟಿ.ಜಿ.ಎಸ್. ನೊಂದಿಗೆ ಕಡ್ಡಾಯವಾಗಿ ಗಾಂಧಿ ಸಾಕ್ಷಿ ಕಾಯಕ ಪಾವತಿ ಆದೇಶವನ್ನು ಬ್ಯಾಂಕಿಗೆ ಸಲ್ಲಿಸತಕ್ಕದ್ದು. ಯಾವುದೇ ಕಾರಣಕ್ಕೂ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಾಮಗಾರಿಗಳ ವಿವರವನ್ನು ಅಳವಡಿಸದೆ ಹಾಗೂ ಗಾಂಧಿ ಸಾಕ್ಷಿ ಕಾಯಕ ಪಾವತಿ ಆದೇಶವಿಲ್ಲದೆ ಬಿಲ್ಲುಗಳನ್ನು ಸಲ್ಲಿಸತಕ್ಕದ್ದಲ್ಲ. ಹಾಗೂ ಬ್ಯಾಂಕ್‌ನವರು ಪಾವತಿಸತಕ್ಕದ್ದಲ್ಲ.

4. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗದವರು IMIS ನಲ್ಲಿ ವೆಚ್ಚ ದಾಖಲಿಸಬೇಕು. ಇದನ್ನು ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಪರಿವೀಕ್ಷಿಸಿ ದೃಢೀಕರಿಸತಕ್ಕದ್ದು.

5. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಕರ್ನಾಟಕ ಪಾರದರ್ಶಕ ಕಾಯ್ದೆ–1999 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು–2000, ಕರ್ನಾಟಕ ಆರ್ಥಿಕ ಸಂಹಿತೆ–1958 ಹಾಗೂ ಚಾಲ್ತಿ ಇರುವ ಇಲಾಖಾ ಇತರೆ ನಿಯಮಗಳು / ಕಾಯ್ದೆಗಳನ್ವಯ ಖರ್ಚು ಭರಿಸತಕ್ಕದ್ದು.

6. ಅನುಮೋದಿತ ಯೋಜನೆಗಳ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದಲ್ಲಿ ಅನುಷ್ಠಾನಗೊಳಿಸಿ, ಯೋಜನೆಗಳನ್ನು ಆದ್ಯತೆ ಮೇಲೆ ಕಾರ್ಯಗತಗೊಳಿಸತಕ್ಕದ್ದು. ಆಯಾ ಯೋಜನೆಗಳ ಅನುಮೋದಿತ ಅಂದಾಜು ವೆಚ್ಚದೊಳಗೆ, ಉದ್ದೇಶಿತ ಯೋಜನಾ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಯಶಸ್ವಿಯಾಗಿ ಪೂರ್ಣಗೊಳಿಸ ತಕ್ಕದ್ದು.

7. ಈ ಆದೇಶದಲ್ಲಿ ರಾಜ್ಯ ವಲಯದ ವಿಶೇಷ ಅಭಿವೃದ್ಧಿ ಕಾರ್ಯಕ್ರಮ (SDP) ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ 4215–01–102–2–01–133 ಅಡಿ ಆಯುಕ್ತರು, RDW&SD ರವರ ಮೇಲುರುಜುವಿನೊಂದಿಗೆ Payees Receipt ಮೇಲೆ ಖಜಾನೆಯಿಂದ ತೆಗೆದು ಕೇಂದ್ರ ಸರ್ಕಾರಕ್ಕೆ ಅಧಿಕೃತವಾಗಿ ಘೋಷಿಸಿರುವ ಸಿಂಡಿಕೇಟ್ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ: 04462010091577ಗೆ ರಾಜ್ಯದ ಪಾಲಾಗಿ ಜಮೆ ಮಾಡಲಾಗಿರುತ್ತದೆ.

8. ರಾಜ್ಯ ಮಟ್ಟದಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ SWSM ನ ಮೂಲ ಉಳಿತಾಯ ಖಾತೆ ಸಂಖ್ಯೆ: 04462010091577 ಯಿಂದ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳ ಮೇಲುರುಜುವಿನೊಂದಿಗೆ ಆಯಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು **ವಿಶೇಷ ಅಭಿವೃದ್ಧಿ ಕಾರ್ಯಕ್ರಮ** ಯೋಜನೆಯಡಿ ಕಳುಹಿಸುವ ಬಿಲ್ಲುಗಳನ್ನು ಈ ಆದೇಶದಲ್ಲಿ ಸಂಬಂಧಿಸಿದ ಜಿಲ್ಲಾವಾರು / ತಾಲ್ಲೂಕುವಾರು ಬಿಡುಗಡೆ ಮಾಡಿರುವ ಅನುದಾನದ ಮಿತಿಯೊಳಗೆ ಮಾನ್ಯ ಮಾಡಲು ಸಿಂಡಿಕೇಟ್ ಬ್ಯಾಂಕ್ – ರಾಜ್ಯ ಮಟ್ಟದಲ್ಲಿ ಕ್ರಮವಹಿಸತಕ್ಕದ್ದು.

9. ಮೇಲ್ಕಂಡ ಅನುದಾನವನ್ನು ಈಗಾಗಲೇ ಅನುಮೋದನೆಯಾಗಿ ಕ್ರಿಯಾ ಯೋಜನೆಯಡಿ ಸೇರ್ಪಡಿಸಲ್ಪಟ್ಟಿರುವ ಮುಂದುವರಿದಿರುವ / ಪೂರ್ಣಗೊಂಡಿರುವ / ಪೂರ್ಣಗೊಳಿಸಬೇಕಾಗಿರುವ ಕುಡಿಯುವ ನೀರಿನ ಯೋಜನೆಗಳ ಸಲುವಾಗಿ ಮಾತ್ರ ವಿನಿಯೋಗಿಸತಕ್ಕದ್ದು.

10. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾ.ಕು.ನೀ.&.ನೈ. ಇಲಾಖೆ ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನವನ್ನು IMIS ನಲ್ಲಿ ಇಂದೀಕರಿಸತಕ್ಕದ್ದು.

11. ಆಯಾಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆದುರಾಗಿ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು IMIS ನಲ್ಲಿ ಪ್ರತಿ ಮಾಹೆ 10ನೇ ದಿನಾಂಕದೊಳಗೆ ಇಂದೀಕರಿಸತಕ್ಕದ್ದು. ಹಾಗೂ ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ ಇವರು ಆಯಾಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು IMIS ನಲ್ಲಿ ಇಂದೀಕರಿಸಿದ ಮಾಹಿತಿಯನ್ನು ಪರಿಶೀಲಿಸತಕ್ಕದ್ದು.

12. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣದಲ್ಲೂ ಇತರೆ ಘಟಕದಡಿ ವರ್ಗಾಯಿಸಿ ಉಪಯೋಗಿಸಿಕೊಳ್ಳದಂತೆ ಕ್ರಮ ವಹಿಸತಕ್ಕದ್ದು. ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ಮಾಡಿ ವರದಿ ಮಾಡತಕ್ಕದ್ದು.

29/06/19.

ಆಯುಕ್ತರು,
ಗ್ರಾ. ಕು. ನೀ. &. ನೈ. ಇಲಾಖೆ, ಬೆಂಗಳೂರು.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–1), ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು–2), ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು–1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, 1ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ, ಕಾವೇರಿಭವನ, ಬೆಂಗಳೂರು.
6. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್), ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
12. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
13. ಮುಖ್ಯ ಲೆಕ್ಕಾಧಿಕಾರಿಗಳು, RDW&SD ಕೇಂದ್ರ ಕಛೇರಿ, ಬೆಂಗಳೂರು.
14. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು.
15. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
16. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು.
17. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ, 4 ವೃತ್ತ ಕಛೇರಿಗಳು
18. ಸಂಬಂಧಪಟ್ಟ ವಿಭಾಗ ಕಛೇರಿಗಳ ಕಾರ್ಯಪಾಲಕ ಅಭಿಯಂತರರು, (ವಿಭಾಗ ಕಛೇರಿಗಳ ಮುಖಾಂತರ ರಾಜ್ಯದ ಉಪ ವಿಭಾಗ ಕಛೇರಿಗಳಿಗೆ)
19. ಆಯುಕ್ತರು, RDW&SD, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
20. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಶಾಖೆ, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
21. ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರ ಆಪ್ತ ಸಹಾಯಕರು.
22. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
24. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
25. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
26. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಅನುಬಂಧ

ಅಧಿಕೃತ ಜ್ಞಾಪನ ಸಂಖ್ಯೆ: ಗ್ರಾಕುನೀ&ನೈಇ/05/ಲೆಕ್ಕ/2019, ಬೆಂಗಳೂರು, ದಿನಾಂಕ 29-06-2019 ರ ಲಗತ್ತು

### ಲೆಕ್ಕ ಶೀರ್ಷಿಕೆ 4215-01-102-1-02 ವಿಶೇಷ ಅಭಿವೃದ್ಧಿ ಯೋಜನೆಯಡಿ (SDP, WPP-SDP) ಬಿಡುಗಡೆಮಾಡಲಾದ ರಾಜ್ಯವಲಯದ ಅನುದಾನ

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ | ಘಟಕ | ತಾಲ್ಲೂಕು ಸಂಖ್ಯೆ | ತಾಲ್ಲೂಕು | ಬಿಡುಗಡೆಮಾಡಲಾದ ಅನುದಾನ |
|---|---|---|---|---|---|
| 1 | ಬಿಜಾಪುರ | SDP | 1 | ಸಿಂದಗಿ | 38.19 |
| | | SDP | 2 | ಇಂಡಿ | 3.20 |
| | | SDP | 3 | ಬಿ ಬಾಗೇವಾಡಿ | 10.99 |
| | | SDP | 4 | ಮುದ್ದೇಬಿಹಾಳ್ | 24.32 |
| | | | | ಒಟ್ಟು | **76.70** |
| 2 | ಚಿಕ್ಕೋಡಿ | SDP | 5 | ಹುಕ್ಕೇರಿ | 143.54 |
| | | | | ಒಟ್ಟು | **143.54** |
| 3 | ಮಂಡ್ಯ | SDP | 6 | ಕೆ.ಆರ್.ಪೇಟೆ | 20.00 |
| | | | | ಒಟ್ಟು | **20.00** |
| 4 | ಹಾಸನ | **WPP-SDP** | 7 | ಹೊಳೆನರಸೀಪುರ | 2.00 |
| | | | | ಒಟ್ಟು | **2.00** |
| 5 | ಕೊಪ್ಪಳ | **WPP-SDP** | 8 | ಗಂಗಾವತಿ | 16.00 |
| | | | | ಒಟ್ಟು | **16.00** |
| | | | | ಒಟ್ಟಾರೆ | **258.24** |

29/06/19.

ಆಯುಕ್ತರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.